<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ,</u>
<u>ನವಲಗುಂದ.</u>

# ಸಿ. ಸಿ. ನಂಃ **144/2020**

ಪಿ.ಡಬ್ಲ್ಯೂ- **2**
ಸಿ.ಡಬ್ಲ್ಯೂ- **4**

| | | |
|---|---|---|
| ಹೆಸರು | ಃ- ಮುತ್ತಪ್ಪ ಡೊಳ್ಳಿ | |
| ತಂದೆ / ಗಂಡನ ಹೆಸರು | ಃ- ಹನಮಪ್ಪ | |
| ವಯಾ | ಃ- 32 ವರ್ಷ | |
| ಉದ್ಯೋಗ | ಃ- ಒಕ್ಕಲುತನ | |
| ವಾಸಸ್ಥಳ | ಃ- ತಿರಲಾಪುರ | |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 02-04-2025. |

<u>*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*</u>

1) ಪ್ರಕರಣದ ಆರೋಪಿಯ ಪರಿಚಯವಿಲ್ಲ. ಚಾಸಾ-1, ಚಾಸಾ-5 ರಿಂದ ಚಾಸಾ-8 ರವರ ಪರಿಚಯ ಇದೆ. ಮೃತ ಉಮೇಶನು ನನ್ನ ಅಣ್ಣನ ಮಗನಾಗಬೇಕು.

2) ಸುಮಾರು 6 ವರ್ಷಗಳ ಹಿಂದೆ ನಾನು ನನ್ನ ಹೊಲದಲ್ಲಿ ಇದ್ದಾಗ ಚಾಸಾ-1 ಮತ್ತು ಉಮೇಶನಿಗೆ ಅಪಘಾತವಾದ ಬಗ್ಗೆ ನನಗೆ ದೂರವಾಣಿ ಕರೆ ಬಂದಿದ್ದು ನಾನು ನವಲಗುಂದದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಮೃತ ಉಮೇಶನ ಶವ ಪಂಚನಾಮೆ ಮಾಡಿದ್ದು ನಾನು ಹಾಜರು ಇರುತ್ತೇನೆ. ಸದರಿ ಪಂಚನಾಮೆ ಈಗ ನೋಡುತ್ತಿದ್ದು ಅದನ್ನು **ನಿ.ಪಿ.2** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ 2 ಚಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.3 ಮತ್ತು ನಿ.ಪಿ.4** ಎಂದು ಗುರುತಿಸಲಾಯಿತು.

3) ನಂತರ ನಾನು ಮೃತನ ದೇಹವನ್ನು ಸ್ವೀಕರಿಸಿದ್ದು ಅದರ ಹಿಂಬರಹವನ್ನು ನೀಡಿದ್ದು ಸದರಿ ಹಿಂಬರವನ್ನು **ನಿ.ಪಿ.5** ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

***ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -***

1) ದಿನಾಂಕ 11-09-2019 ರಂದು ಮದ್ಯಾಹ್ನ ಸುಮಾರು 02-00 ಗಂಟೆಗೆ ಚಾಸಾ-1 ಮತ್ತು ಮೃತ ಉಮೇಶನು ಮೋಟಾರ ಸೈಕಲ್ ವಾಹನ ಸಂಖ್ಯೆ ಕೆಎ 26 ವಿ 1427 ನೇದ್ದರ ಮೇಲೆ ಚಾಸಾ-1 ರವರು ಹಿಂಬದಿ ಸವಾರನಾಗಿ ಮೊರಬ ತಿರಲಾಪುರ ರಸ್ತೆಯ ಮೇಲೆ ಹತ್ತಿಗೆ ಹೊಡೆಯುವ ಔಷಧಿಯನ್ನು ತರಲು ಹೋಗುತ್ತಿರುವಾಗ ಅದೇ ಮೊರಬ ತಿರಲಾಪುರ ರಸ್ತೆಯ ಮೇಲೆ ಮಾಸ್ತಿಯವರ ಕೆರೆಯ ಹತ್ತಿರ ಆರೋಪಿತನು ಚಲಾಯಿಸುತ್ತಿದ್ದ ಟ್ರಾಕ್ಟರ ಸಂಖ್ಯೆ ಕೆಎ 25 ಟಿಬಿ 4696 ನೇದ್ದನ್ನು ಹೊಲದ ಕಡೆಯಿಂದ ಒಮ್ಮೆಲೆ ಮೊರಬ ತಿರಲಾಪುರ ರಸ್ತೆಗೆ ತೆಗೆದುಕೊಂಡು ಬಂದು ಅವರ ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿ.

2) ಸದರಿ ಅಪಘಾತವು ಆರೋಪಿತನ ಅಲಕ್ಷತನದಿಂದ ಆಗಿದ್ದು, ಮೋಟಾರ ಸೈಕಲ್ ಚಾಲಕನಾದ ಉಮೇಶನು ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿದ್ದು ಚಾಸಾ-1 ರವರಿಗೆ ಗಾಯಗಳಾಗಿರುತ್ತದೆ ಎಂದರೆ ಸರಿ.

3) ಸದರಿ ಅಪಘಾತದ ಬಗ್ಗೆ ನಾನು ಮಾಹಿತಿಯನ್ನು ಪಡೆದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದಃ**

1) ಅಪಘಾತದ ಸಮಯದಲ್ಲಿ ನಾನು ನನ್ನ ಹೊಲದಲ್ಲಿ ಇದ್ದೆ ಎಂದರೆ ಸರಿ. ನನಗೆ ಅಪಘಾತದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

2) ಮೃತ ಉಮೇಶನು ನನ್ನ ಅಣ್ಣನ ಮಗನಾಗಿದ್ದು ಆತನ ಕುಟುಂಬಕ್ಕೆ ವಿಮೆಯ ಸೌಲಭ್ಯವನ್ನು ಒದಗಿಸಿ ಕೊಡಲು ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**